Orders for druggets and carpets for furnishing Legislature building.

Q.—142. **Sri N. C. NAGAIAH REDDY** (Goribidnur)—

Will the Government be pleased to state—

(a) whether they have placed orders for the manufacture and supply of druggets and carpets for furnishing the Legislature building which is proposed to built.

(b) the estimated cost of such material;

(c) with whom the orders have been placed ?

A.—**Sri. Kadidal MANJAPPA** (Minister for Revenue and Public works).—

(a) No.

(b) Estimate is not yet prepared ?

(c) Does not arise.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ನನ್ನ (ಎ) ಪ್ರಶ್ನೆಗೆ "ಕೊಟ್ಟಿಲ್ಲ" ಎಂದು ಉತ್ತರ ಕೊಡಲಾಗಿದೆ. ಆದರೆ Estimate ಗಳನ್ನು ತಯಾರಿಸಬೇಕೆಂದು ಆಲೋಚನೆಗಳನ್ನೇನಾದರೂ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರಮೇಯ ಬಂದಾಗ ನೋಡೋಣ. ಈಗ ಮಾಡಬೇಕಾದ ಅವಶ್ಯಕತೆಯೇನೂ ಇರುವುದಿಲ್ಲ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಎಸ್ಟಿಮೇಟ್ ಮಾಡಲೇಬೇಕಾಗಿಲ್ಲವೆಂಬುದು ತಮ್ಮ ಅಭಿಪ್ರಾಯವೋ?

ಅಧ್ಯಕ್ಷರು.—ಅಂದಾಜು ತಯಾರಿಸಿಲ್ಲವೆಂದು ಹೇಳಿದ್ದಾರೆ. ತಮಗೆ ಮತ್ತೇನಾಗಬೇಕು:

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಸೆಂಟ್ರಲ್ ಜೈಲಿನಲ್ಲಿ 3 ಲಕ್ಷ ರೂಪಾಯಿಗಳೊಳಗೆ ರತ್ನಕಂಬಳಿಗಳನ್ನು ತಯಾರಿಸಲು ತಾವೇನೂ ಇಸ್ಪೆಕ್ಷ್ ಕೊಟ್ಟಿಲ್ಲವೋ ?

Sri Kadidal MANJAPPA.—I am not aware of.

Sri N. C. NAGIAH REDDY—Are you sure?

Sri Kadidal MANJAPPA.—I am sure.

ಶ್ರೀ ಕೆ. ಪುಟ್ಟಸ್ವಾಮಿ.—50 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಕಟ್ಟಿಸತಕ್ಕ ವಿಧಾನ ಸಭಾ ಮಂದಿರದಲ್ಲಿ ಹಾಸತಕ್ಕ ರತ್ನಕಂಬಳಿಗೆ ಎಷ್ಟು ಅಂದಾಜು ಮೊಬಲಗು ಆಗಬಹುದೆಂಬುದನ್ನು ಪರ್ಯಾಲೋಚನೆ ಮಾಡಿಲ್ಲವೇ ?

Sri Kadidal MANJAPPA.—It does arise.

ಶ್ರೀ ಬಿ. ಹುಚ್ಚೇಗೌಡ.—ವಿಧಾನಸಭಾ ಭವನಕ್ಕೆ ತಗಲತಕ್ಕ ಖರ್ಚು 20 ಲಕ್ಷವೋ 50 ಲಕ್ಷವೋ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಹೇಳುವುದಕ್ಕೆ ಆ ಭವನದ ಕೆಲಸವಿನ್ನೂ ಪೂರೈಸಿಲ್ಲ. ಡೀಜೇಲ್ಡ್ ಎಸ್ಟಿಮೇಟ್ ಇನ್ನೂ ಆಗಿಲ್ಲ.

ಶ್ರೀ ಬಿ. ನಾರಾಯಣಸ್ವಾಮಿ.—ಹಾಗೆ ರತ್ನಕಂಬಳಿ ಕೊಂಡುಕೊಳ್ಳಬೇಕೆಂಬುದಾಗಿ ಅಥವಾ ಕೊಳ್ಳಬೇಕೆಂಬ ಇಚ್ಛೆಯಿರುವುದಾಗಿ ತಾವೇನೂ ಆಲೋಚನೆ ಮಾಡಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಮಾಡಿದರೆ, ಕೂಸು ಹುಟ್ಟುವುದಕ್ಕೆ ಮುಂಚೆ ಕುರಾಪಿ ಹೊಲಸಿದ ಹಾಗೆ ಆಗುತ್ತದೆ. ಅಂಥ ಆಲೋಚನೆಗಳಾವುದನ್ನೂ ಮಾಡಿಲ್ಲ.

Extending the Tenancy Act to Hassan District.

Q.—251. **Sri G. A. THIMMAPPA GOWDA.**—(Arkalgud).

Will the Government be pleased to state :—

(a) whether they are aware of the persistent demand of the Agriculturists of Hassan District for extending the provisions of the Tenancy Act to Hassan District.

(b) whether they intend to take immediate steps to extend the same to Hassan District.

A.—**Sri Kadidal MANJAPPA** (Minister for Revenue and Public Works).—

(a) No.

(b) Government have no objection to introduce the Tenancy Act to Hassan District if circumstances demand.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಟೆನೆಸಿ ಆಕ್ಟ್‌ನ್ನು ಹಾಸನ ಜಿಲ್ಲೆಗೆ ಒದಗಿಸತಕ್ಕ ಸಂದರ್ಭ ಸರ್ಕಾರಕ್ಕೆ ಯಾವಾಗ ಒದಗಬಹುದು ?

ಶ್ರೀ ಕಡಿದಾಳ್ ಮಂಜಪ್ಪ.—ಯಾವಾಗ ಅಲ್ಲಿನ ಜನರು ಅದನ್ನು ಅನ್ವಯಿಸುವಂತೆ ಮಾಡಿಕೊಡಬೇಕೆಂದು ಕೇಳುತ್ತಾರೋ ಆಗ ಸಂದರ್ಭ ಒದಗುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಆಕ್ಟನ್ನು ನಮ್ಮ ಹಾಸನ ಜಿಲ್ಲೆಗೆ ಅನ್ವಯಿಸುವಂತೆ ಮಾಡಬೇಕೆಂದು ಜನರು ಒತ್ತಾಯಮಾಡಿದರೆ ಕೂಡಲೇ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗಾದರೆ ಅದರಲ್ಲಿ ಅಭ್ಯಂತರವೇ ಇಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಆಕ್ಟನ್ನು ಇಡೀ ಸಂಸ್ಥಾನಕ್ಕೆ ಅನ್ವಯಿಸದೆ ಕೆಲವೇ ಕೆಲವು ತಾಲ್ಲೂಕುಗಳಿಗೆ ಅನ್ವಯಿಸುವಂತೆ ಹುಕುಂ ಮಾಡಲು ಕಾರಣವೇನು ?

Sri Kadidal MANJAPPA.—We are observing the working of the Act.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಆಕ್ಟನು ಸಂಸ್ಥಾನಾದ್ಯಂತವೂ ಜಾರಿಗೆ ತಂದಲ್ಲಿ ಇದರಿಂದ ರೈತರಿಗೆ ತುಂಬಾ ಸಹಾಯವಾಗುತ್ತದೆಂಬ ವಿಷಯದಲ್ಲಿ ಸರ್ಕಾರದವರಿಗಿರತಕ್ಕ ಅನುಮಾನವಾದರೂ ಏನು ?

Sri Kadidal MANJAPPA.—It is too early to say any thing.

ಶ್ರೀ ಬಿ. ವೈ. ನೀಲೇಗೌಡ.—ಶ್ರೀರಂಗಪಟ್ಟಣದಲ್ಲಿ ಈ ಆಕ್ಟ್‌ನ್ನು ಜಾರಿಗೆ ತರಲು ತಮಗೇನು ತೊಂದರೆ ಇದೆ ?